## ಇಲ್ಲಿಯವರೆಗೆ...



ಆಶ್ರಮದಲ್ಲಿ ನಡೆದ ಮಣಿಲಾಲನ ಘಟನೆಯನ್ನು ತಿಳಿದು ಹರಿಲಾಲನ ಮನಸ್ಸು ರೋಷಗೊಂಡಿತ್ತು. ಬಾಪೂ ಬರೆದ ಪತ್ರಕ್ಕೆ ಹರಿಲಾಲ ಉತ್ತರಿಸಲಿಲ್ಲ. ಇದರಿಂದ ಬಾಪೂ ಕೂಡ ವ್ಯಗ್ರರಾಗಿದ್ದರು. ಈಗ ಬಾಪೂ ಆಫ್ರಿಕಾವನ್ನು ತ್ಯಜಿಸಿ ಹಿಂದೂಸ್ತಾನದಲ್ಲೇ ಉಳಿಯುವ ತೀರ್ಮಾನ ಮಾಡಿದ್ದಲ್ಲದೆ ಬಾ ಮತ್ತು ಬಾಪೂ ಇಬ್ಬರೂ ಗ್ರಹಸ್ಥ ಜೀವನಕ್ಕೆ ಮರಳುವ ನಿರ್ಧಾರವನ್ನು ಗಟ್ಟಿಮಾಡುತ್ತಾರೆ. ಬಾಪೂ ಬರುವುದಕ್ಕೆ ಕೆಲದಿನಗಳ ಮೊದಲೇ ರಾಮದಾಸ, ಹರಿಲಾಲ, ಮಣಿಲಾಲ ಮೂವರೂ ಹಿಂದೂಸ್ತಾನಕ್ಕೆ ಬಂದು ಸಂಧಿಸಿ ಖುಷಿಪಟ್ಟರು. ಬಾಪೂ ಆಫ್ರಿಕಾದಿಂದ ನೇರವಾಗಿ ಎಲ್ಲಿಗೆ ಹೋಗಲಿದ್ದಾರೆ ಎಂದು ಹರಿಲಾಲ ಮಣಿಲಾಲನನ್ನು ಕೇಳುತ್ತಾನೆ. ಮೊದಲು ಸೇಠ್ ನರೋತ್ತಮದಾಸರ ಬಂಗಲೆಯಲ್ಲಿ ಉಳಿದು ಅಲ್ಲಿಂದ ರಾಜಕೋಟ ಹಾಗೂ ಪೋರಬಂದರಿಗೆ ಹೋಗುವ ಬಗ್ಗೆ ಮಾಹಿತಿಯಿದೆ ಎನ್ನುತ್ತಾನೆ ಮಣಿಲಾಲ. ಮುಂಬಯಿಯಲ್ಲಿ ಹಡಗು ಬಂದು ಲಂಗರು ಹಾಕುತ್ತದೆ. ಸೇಠ್ ನರೋತ್ತಮದಾಸ, ಹರಿಲಾಲ ಬಾಪೂ ಅವರನ್ನು ಸ್ವಾಗತಿಸುತ್ತಾರೆ.

ಹರಿಲಾಲ ಇನ್ನೂ ಮೆಟ್ರಿಕ್ ಪಾಸಾಗಿರಲಿಲ್ಲ. ಖರ್ಚಿಗೆ ಹಣವೂ ಇರಲಿಲ್ಲ. ಈ ಮಧ್ಯೆ ತಮ್ಮ ತಂದೆ, ಚಿಕ್ಕಪ್ಪಂದಿರ ಆಸ್ತಿಯಲ್ಲಿ ಭಾಗ ಕೇಳುವುದಾಗಲಿ, ಹಣ ಕೇಳುವುದಾಗಲಿ ಮಾಡುವುದಿಲ್ಲ. ಅದು ಸರಿಯಲ್ಲ. ನಮ್ಮ ದಾರಿಯನ್ನು ನಾವೇ ಕಂಡುಕೊಳ್ಳಬೇಕು ಎಂದು ಬಾಪೂ ಹರಿಲಾಲನಿಗೆ ಹೇಳುತ್ತಾರೆ. ಇದರಿಂದ ಹರಿಲಾಲನಿಗೆ ತುಂಬ ನಿರಾಸೆಯಾಗುತ್ತದೆ. ಮುಂದೆ ಬಾಪೂಗೆ ಒಂದು ಪತ್ರವನ್ನೂ ಬರೆಯುತ್ತಾನೆ ಹರಿಲಾಲ. ವೇದನೆಗೊಂಡ ಹರಿಲಾಲ ಸೇಠ್ ನರೋತ್ತಮದಾಸರಲ್ಲೇ ಉದ್ಯೋಗ ಕೊಡಿಸಬೇಕೆಂದು ಕೇಳಿಕೊಳ್ಳುತ್ತಾನೆ. ಆಗ ಕಲ್ಕತ್ತಾ ಅಥವಾ ಸೋಲಾಪುರಲದಲ್ಲಿರುವ ಮಿಲ್‌ನಲ್ಲಿ ಕೆಲಸ ಕೊಡಿಸುವುದಾಗಿ ಭರವಸೆ ನೀಡುತ್ತಾರೆ. ತನ್ನ ಜೀವನಕ್ಕೆ ಒಂದು ಹಾದಿಯಾಯಿತು. ಎಲ್ಲಿಗೆ ಬೇಕಾದರೂ ಹೋಗಿ ಕೆಲಸ ಮಾಡಲು ಸಿದ್ಧ ಎಂದು ಹರಿಲಾಲ ನರೋತ್ತಮದಾಸರಲ್ಲಿ ಹೇಳುತ್ತಾನೆ.

ತೋಚಬಹುದು ಎಂಬ ವಿಶ್ವಾಸದೊಂದಿಗೆ ಹರಿಲಾಲ ಅಹಮದಾಬಾದ್‌ನಲ್ಲಿದ್ದ ಮಣಿಲಾಲನಿಗೆ ಪತ್ರವನ್ನು ಬರೆದ. ಪತ್ರದಲ್ಲಿ ಗುಲಾಬ ಮತ್ತು ಮಕ್ಕಳನ್ನು ಕಲ್ಕತ್ತಾಕ್ಕೆ ಕರೆತರುವಂತೆ ಆಗ್ರಹಿಸಿದ್ದ. ಅವನು ಪತ್ರದಲ್ಲಿ, ತನ್ನ ನೌಕರಿ ಹೊಸದು, ಮನೆಗೆ ವಸ್ತುಗಳನ್ನು ಖರೀದಿಸಲು ಸ್ವಲ್ಪ ಹಣ ಬೇಕಾಗಬಹುದು, ಸಾಧ್ಯವಾದರೆ ಸಹಾಯದ ರೂಪದಲ್ಲಿ ಸ್ವಲ್ಪ ಹಣವನ್ನೂ ತೆಗೆದುಕೊಂಡು ಬಾ ಎಂದೂ ಬರೆದಿದ್ದ.

ಮಣಿಲಾಲ, ಹರಿಲಾಲನ ಆದೇಶವನ್ನು ತಕ್ಷಣ ಪಾಲಿಸಿದ. ಗುಲಾಬ ಮಕ್ಕಳೊಂದಿಗೆ ಕೆಲವು ದಿನಗಳನ್ನು ಕಳೆಯಲು ರಾಜಕೋಟಕ್ಕೆ ಹೋಗಿದ್ದಳು. ಮಣಿಲಾಲ, ಬಾ ಮತ್ತು ಬಾಪೂ ಅವರ ಒಪ್ಪಿಗೆಯನ್ನು ಪಡೆದು ರಾಜಕೋಟಕ್ಕೆ ಹೋದ, ಅಲ್ಲಿಂದ ಅಣ್ಣನ ಪರಿವಾರವನ್ನು ಕರೆತಂದ. ಒಂದು ದಿನ ಕೋಚರಬ್‌ನಲ್ಲಿ ಕಳೆದು ಗುಲಾಬ ಮತ್ತು ಮಕ್ಕಳೊಂದಿಗೆ ಮಣಿಲಾಲ ಕಲ್ಕತ್ತಾಕ್ಕೆ ಹೊರಟ.

ಕಲ್ಕತ್ತಾಕ್ಕೆ ಬಂದ ನಂತರ ಮಣಿಲಾಲ ಅಣ್ಣನಿಗೆ, ತನ್ನೊಂದಿಗೆ ತಂದಿದ್ದ ಹಣವನ್ನೂ ಕೊಟ್ಟ.

'ಅಣ್ಣಾ, ಇದಕ್ಕಿಂತ ಹೆಚ್ಚು ಹಣ ನನ್ನಲ್ಲಿರಲಿಲ್ಲ,' ಮಣಿಲಾಲ ದುಃಖವನ್ನು ವ್ಯಕ್ತಪಡಿಸುತ್ತಾ ಹೇಳಿದ, 'ಆಶ್ರಮದ ಜೀವನದಲ್ಲಿ ಹಣ ಉಳಿಸುವ ಯಾವ ಉಪಾಯವೂ ಇರುವುದಿಲ್ಲ ಎಂಬುದು ನಿಮಗೆ ಗೊತ್ತೇ ಇದೆ.'

'ಗೊತ್ತಿದೆ ಮಣಿ,' ಹರಿಲಾಲ ಅವನಿಗೆ ಕೃತಜ್ಞತೆಯನ್ನು ಅರ್ಪಿಸುತ್ತಾ ಹೇಳಿದ, 'ನೀನು ಇಷ್ಟು ಹಣವನ್ನು ಹೇಗೆ ತಂದೆ ಎಂದು ನನಗೂ ಆಶ್ಚರ್ಯವಾಗುತ್ತಿದೆ.'

'ನಾನು ಆಫ್ರಿಕಾದಲ್ಲಿದ್ದಾಗ ಆರಂಭದ ದಿನಗಳಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಿದ್ದೆ, ಇದು ಆ ಶ್ರಮದ ಹಣವಾಗಿದೆ. ಈ ಹಣವನ್ನು ನಾನು ನಾರಾಯಣದಾಸ ಚಿಕ್ಕಪ್ಪರ ಬಳಿ ಜಮಾ ಮಾಡಿ ಇಟ್ಟಿದ್ದೆ.' ಮಣಿಲಾಲ ಸ್ಪಷ್ಟಪಡಿಸಿದ, 'ಆ ಹಣವನ್ನೇ ಅವರಿಂದ ಪಡೆದು ಇಲ್ಲಿಗೆ ತಂದಿದ್ದೇನೆ.'

ಹರಿಲಾಲ ಗದ್ಗದಿತನಾದ. ಮಣಿಲಾಲ ಅಹಮದಾಬಾದ್‌ಗೆ ಮರಳಿ ಹೋದ ನಂತರ ಹರಿಲಾಲ ತನ್ನ ತಮ್ಮನಿಗೆ ಪತ್ರವನ್ನು ಬರೆದ. ಕಷ್ಟದ ಸಮಯದಲ್ಲಿ ಸಹಾಯವನ್ನು ಮಾಡಿದ್ದಕ್ಕೆ ಕೃತಜ್ಞತೆಯನ್ನು ಪತ್ರದಲ್ಲಿ ತಿಳಿಸಿದ. ಮಣಿಲಾಲ ಕೊಟ್ಟ ಹಣದಿಂದ ನನ್ನ ಚಿಂತೆ ತುಂಬಾ ಕಡಿಮೆಯಾಗಿದೆ ಎಂದೂ ಪತ್ರದಲ್ಲಿ ಬರೆದಿದ್ದ.

***

### ಪತ್ರ ಓದಿ ವ್ಯಗ್ರರಾದ ಬಾಪೂ

ಆ ಪತ್ರ ಅಹಮದಾಬಾದ್‌ನ ಆಶ್ರಮಕ್ಕೆ ತಲುಪಿದಾಗ ಮಣಿಲಾಲ ಆಶ್ರಮದಲ್ಲಿರಲಿಲ್ಲ. ಇನ್ನಿತರ ಪತ್ರಗಳೊಂದಿಗೆ ಅದು ಬಾಪೂ ಅವರ ಕೈಗೆ ಬಂತು. ಹರಿಲಾಲನ ಕೈ ಬರಹವನ್ನು ನೋಡಿ ಬಾಪೂ ಪತ್ರವನ್ನು ಓದಿದರು. ಮಣಿಲಾಲ, ಹರಿಲಾಲನಿಗೆ ಆರ್ಥಿಕವಾಗಿ ಸಹಾಯವನ್ನು ಮಾಡಿರುವ ವಿಷಯವನ್ನು ತಿಳಿದು ಬಾಪೂ ಅವರು ಗಾಢ ಯೋಚನೆಗೊಳಗಾದರು. ಬಾಪೂ ಅವರಿಗೆ ಈ ವಿಷಯ ಲೇಶಮಾತ್ರವೂ ತಿಳಿದಿರಲಿಲ್ಲ. ಹರಿಲಾಲ ಹಣವನ್ನು ಯಾಚಿಸಿದ್ದು, ಮಣಿಲಾಲ ಕಲ್ಕತ್ತಾಕ್ಕೆ ಹೋಗಿ ಹರಿಲಾಲನಿಗೆ ಹಣ ಕೊಟ್ಟು ಬಂದಿದ್ದು ಈ ಯಾವ ವಿಷಯವೂ ಸಹ ಬಾಪೂ ಅವರಿಗೆ ತಿಳಿದಿರಲಿಲ್ಲ. ಆ ಪತ್ರವನ್ನು ಓದಿದ ನಂತರ ಬಾಪೂ ಅವರು ವ್ಯಗ್ರರಾದರು. ಹರಿಲಾಲನ ಜೀವನದ ಹಾದಿಯೇ ಬದಲಾಗಿದೆ ಎಂಬ ವಿಷಯ ತಿಳಿದ ನಂತರ, ಅವನಿಗೆ ಎಲ್ಲಿಂದಲೂ, ಯಾವುದೇ ರೀತಿಯ ಆರ್ಥಿಕ ಸಹಾಯ ಲಭಿಸಬಾರದು ಎಂದು ಬಾಪೂ ಅವರು ಭಾವಿಸಿದ್ದರು. ಹಣ ಮತ್ತು ಭೌತಿಕ ಅನುಕೂಲಗಳಿಗಾಗಿ ಹರಿಲಾಲನ ಬಯಕೆಗಳು ಸ್ವರ್ಣಮೃಗವನ್ನು ಪಡೆದಂತೆ ಎಂಬುದು ಬಾಪೂ ಅವರ ವಿಚಾರವಾಗಿತ್ತು. ಹರಿಲಾಲ ಆ ಸ್ವರ್ಣಮೃಗದ ಹಿಂದೆ ತನ್ನ ಜೀವನವನ್ನು ಹಾಳು ಮಾಡಿಕೊಳ್ಳಬಾರದು ಎಂದು ಬಾಪೂ ಬಯಸುತ್ತಿದ್ದರು. ಅದಕ್ಕಾಗಿ ಹರಿಲಾಲನಿಗೆ ಯಾವುದೇ ವಿಧದ ಸಹಾಯವನ್ನು ಮಾಡಬಾರದು ಎಂದು ಬಾಪೂ ನಿರ್ಧರಿಸಿದ್ದರು. ಈ ಬಗ್ಗೆ ಅವರು ಹರಿಲಾಲನಿಗೆ ಅಗತ್ಯವಾದ ಸ್ಪಷ್ಟೀಕರಣವನ್ನೂ ಸಹ ನೀಡಿದ್ದರು.

ಬಾಪೂ ಅವರ ದುಃಖಕ್ಕೆ ಅನೇಕ ಕಾರಣಗಳಿದ್ದವು. ಇಷ್ಟೆಲ್ಲಾ ನಡೆದಿದ್ದಾಗ್ಯೂ ಹರಿಲಾಲ ಸಹಾಯವನ್ನು ಯಾಚಿಸಿದ, ಮಣಿಲಾಲ ಅವನಿಗೆ ಸಹಾಯವನ್ನೂ ಮಾಡಿದ. ಇದು ಸರಿಯೇ. ಬಾಪೂ ಅವರ ಕ್ರೋಧದ ಅರಿವಿದ್ದಾಗ್ಯೂ ಮಣಿಲಾಲ ಹರಿಲಾಲನಿಗೆ ಹಣವನ್ನು ಕೊಟ್ಟ. ಆಶ್ರಮವಾಸಿಗಳ ಬಳಿ ವೈಯಕ್ತಿಕವಾಗಿ ಉಳಿತಾಯದ ಹಣ ಅಥವಾ ಬಂಡವಾಳ ಇರಬಾರದು ಎಂಬುದು ಬಾಪೂ ಅವರ ನಿಲುವಾಗಿತ್ತು. ಇಂಥ ಪರಿಸ್ಥಿತಿಯಲ್ಲಿ, ಮಣಿಲಾಲ ಆಶ್ರಮದ ಲೆಕ್ಕದಲ್ಲಿಯೇ, ಹೇಗೋ ಮಾಡಿ ಹಣವನ್ನು ಹರಿಲಾಲನಿಗೆ ತಲುಪಿಸಿದ್ದ ಸಾಧ್ಯತೆಯಿತ್ತು; ಈ ರೀತಿಯ ಕಲ್ಪನೆ ಮಾತ್ರದಿಂದಲೇ ಬಾಪೂ ಕಂಪಿಸಿದರು. ಆಶ್ರಮದ ಲೆಕ್ಕಪತ್ರಗಳನ್ನು ಮಣಿಲಾಲನೇ ನೋಡಿಕೊಳ್ಳುತ್ತಿದ್ದ. ಒಂದು ವೇಳೆ ಅವನು ಆ ಹಣದಿಂದಲೇ ಹರಿಲಾಲನಿಗೆ ಹಣವನ್ನು ಕೊಟ್ಟಿದ್ದರೆ! ಒಂದು ವೇಳೆ ಮಣಿಲಾಲ